'ವಿನೀ ಸೈಕಲ್ ಸಾಹಸವನ್ನ ಈಗ ಸೆಲಬ್ರೇಟ್ ಮಾಡಣ' ಎಂದು ಬೇಡವೆಂದರೂ ಕೇಳದೇ, 'ಪರವಾಗಿಲ್ಲ, ಇಬ್ಬರೂ ಇಲ್ಲೇ ಮಲಗ್ತೀರಿ, ಒಂದಿನ ಕುಡಿದ್ರೆ ಏನಾಗಲ್ಲ' ಎಂದು ಗ್ಲಾಸಿಗೆ ಸುರಿದಳು. ಇವರಿಬ್ಬರೂ ಏನಾದ್ರೂ ಹಾಡೇ ಎಂದು ಕೇಳುವ ಮೊದಲೇ ರಾಜೋ, 'ವಹ್ ಸುಬಹ್ ಕಭೀ ತೋ ಆಯೇಗಿ, ವಹ್ ಸುಬಹ್ ಕಭೀ ತೋ ಆಯೇಗಿ' ನಾಲ್ಕಾರು ಸಾಲು ಹಾಡಿದಳು.

'ಫಿರ್ ಸುಬಹ್ ಹೋಗೀ ಸಿನಿಮಾದಲ್ಲಿ ಈ ಹಾಡು ಮೂರೋ ನಾಲ್ಕೋ ಸಲ ಬರುತ್ತೆ ಅಲ್ಲವಾ. ಅದ್ರಲ್ಲಿ ಕೊನೇಲಿ ಬರೋ ಸಾಲುಗಳು ಏನು ಗೊತ್ತಾ?' ಇಬ್ಬರೂ ಗೊತ್ತಿಲ್ಲಪ್ಪ ಎಂದು ತಲೆಯಾಡಿಸಿದರು. ರಾಜೋ ಹಾಡುವ ಹುಕಿಯಲ್ಲಿದ್ದಳು.

'ಜಬ್ ಧರತೀ ಪರವಟ್ ಬದಲೇಗೀ, ಜಬ್ ಖೈದ್ ಸೆ ಖೈದಿ ಛೂಟೇಂಗೆ. ಉಸ್ ಸುಬಹ್ ಕೋ ಹಮ್ ಹೀ ಲಾಯೇಂಗೆ.. ವಹ್ ಸುಬಹ್ ಹಮೀ ಸೇ ಆಯೇಗಿ'

ಆ ಬೆಳಗನ್ನು ನಾವೇ ತರೋಣ. ಆ ಬೆಳಗು ನಮ್ಮಿಂದಲೇ ಬರುವುದು...

ರಾಜೋ ದನಿಯಲ್ಲಿಯೇ ಬೆಳಗನ್ನು ತರುವಂತೆ ಮತ್ತೆರಡು ಸಲ ರಾಗವಾಗಿ ಇವೇ ಸಾಲುಗಳನ್ನು ಹಾಡಿದಳು.

'ನನ್ನ ಅತ್ತೆ ಹೇಳಿದ ಲಾಟೀನು ಹಿಡಿದು ನಡೀತಾ ಇದ್ದರೆ, ನಾವೇ ಆ ಬೆಳಗನ್ನು ತರತೀವಿ' ರಾಜೋ ಹಾಡು ಮುಗಿಸಿ ಹಗುರಾಗಿ ಹೇಳಿದಳು. ಮೂವರೂ ಮತ್ತೆ ಸುಮಾರು ಹೊತ್ತು ಹರಟಿದರು.

'ಸರಿಯಪ್ಪ... ನಂಗೆ ಕಣ್ಣೆಳೀತಾ ಇದೆ. ನಾನು ಆ ಕಡೆ ರೂಮಿನಲ್ಲಿ ಮಲಗ್ತೀನಿ...' ರಾಜೋ ಮಲಗಲು ಹೋದಳು.

ಮೇಗಲೆ ಏನೋ ಹೇಳಿಕೊಳ್ಳುವುದು ಬಾಕಿಯಿದೆ ಎಂಬಂತೆ ಕೂತಿದ್ದಳು.

'ಮತ್ತೆ ನಿನ್ನ ಆಪ್ತ ಸಮಾಲೋಚನೆ ಹೆಂಗೆ ನಡೀತಾ ಇದೆ?' ವಿನೀ ಕೇಳುವುದನ್ನೇ ಕಾಯುತ್ತಿದ್ದಳೇನೋ.

'ಅದೆಲ್ಲ ಚೆನ್ನಾಗೇ ನಡೀತಿದೆ ಕಣೇ. ಆದ್ರೂ ಕೆಲವೊಮ್ಮೆ ಒಂಥರಾ ಒಂಟಿತನ ಒಳಗಿನಿಂದ ಒದ್ದುಕೊಂಡು ಬರುತ್ತೆ ವಿನೀ. ಇರೋದು ಒಂದೇ ಬದುಕು. ಯಾವ ಒಂದು ಆಪ್ತಭಾವದ, ಪ್ರೀತಿಯ ನವಿರು ಸ್ಪರ್ಶನೂ ಅಂಟಿಸಿಕೊಳ್ಳದೇ ಎಲ್ಲ ಕ್ಷಣಗಳೂ ಹಂಗೇ ಒಣಗಿಹೋಗಿ ಬಿಡುತ್ತದೆಯಲ್ಲ. ಒಂದೇ ಒಂದು ಪುಳಕವೂ ಮೈಮನಸ್ಸಿನ ಕಣಗಳನ್ನು ತಬ್ಬೋದಿಲ್ಲವಲ್ಲ. ಆಳಗಲ ಕಲ್ಪನೆಗೂ ನಿಲುಕದ ಕಗ್ಗತ್ತಲ ಬಾವಿಯಲ್ಲಿ ಬೀಳ್ತಾ ಬೀಳ್ತಾ..ಪೂರ್ಣ ತಳಕ್ಕೆ ದೇಹ ಧಪ್ ಅಂತ ಬೀಳುತ್ತದೆಯಲ್ಲ. ಯಾವುದೋ ಬೆಚ್ಚಗಿನ ಕೈ ಹೀಗೆ ಮೆತ್ತಗೆ ಎತ್ತಿಕೊಳ್ಳುತ್ತೆ ಮೇಲೆ ಎಂಬ ನಿರೀಕ್ಷೆಯೂ ನಿಧಾನಕ್ಕೆ ಹುಸಿಯಾಗ್ತಾ...ಅಲ್ಲಾ.ನಮ್ಮ ಕೆಫೆ ಕಾಫಿ ಡೇಯ ಸಿದ್ಧಾರ್ಥನಿಗೂ ಅವತ್ತು ಆ ಸೇತುವೆ ಮೇಲೆ ನಡ್ಕೊಂಡು ಹೋಗ್ತಾ ಹಿಂಗೇ ಅನ್ನಿಸಿರಬೌದಲ್ಲ. ಈಗ ಕೌನ್ಸೆಲಿಂಗ್ ಕೋರ್ಸ್ ಮುಗಿಸಿದ ಮೇಲೆ, ನಾನೇ ಸಮಾಲೋಚನೆ ಮಾಡಬೇಕಿದ್ದರೆ ಅರಿವಾಗ್ತಿದೆ. ಹಂಗೆ ಬಿದ್ದಾಗ ಯಾವುದೋ ಬೆಚ್ಚಗಿನ ಕೈಗಳು ಮೇಲೆತ್ತಬೇಕು ಅನ್ನೋ ನಿರೀಕ್ಷೆಯೇ ಸರಿಯಲ್ಲ. ಸ್ವಲ್ಪ ಹೊತ್ತು ಹಂಗೆ ಬಿದ್ದಿರುವುದು ಪರವಾಗಿಲ್ಲ ಅಂದುಕೋಬೇಕು. ಆಮೇಲೆ ನಾವೇ ಮೆಲ್ಲಗೆ ಸಾವರಿಸಿಕೊಳ್ಳಬೇಕು. ಹಗೂರಕ್ಕೆ ಬಲ ಒಟ್ಟುಗೂಡಿಸಿಕೋಬೇಕು. ಯಾವ ಆಸರೆಯ ಅಗತ್ಯನೂ ಇಲ್ಲದಂತೆ ಮೆತ್ತಗೆ ತೇಲ್ತಾ ಮೇಲೆ ಬರಬೇಕು. ಹಂಗೆ ಬಂದು ಬಾವಿ ಕಟ್ಟೆ ಮೇಲೆ ಕೂತಗೊಂಡರೆ. ಕಾರಿರುಳಲ್ಲಿ ಕಣ್ಣೆತ್ತಿದರೆ. ಆಹಾ. ನಕ್ಷತ್ರಲೋಕ ಕಾಣಿಸುತ್ತೆ. ಅರೆ... ಇಂಥ ಸೊಬಗಿನ ಹೊರಲೋಕ ಕಾಣಲಿಕ್ಕೆ ನಮ್ಮ ಒಳಗಣ್ಣು ತೆರೆದಿದ್ದರೆ ಸಾಕು ಎನ್ನಿಸುತ್ತೆ. ಸಿದ್ಧಾರ್ಥ ಹಂಗೆ ಸೇತುವೆ ಮೇಲೆ ಹೋಗಬೇಕಿದ್ದರೆ ಕೆಳಬಾಗಿ ನೀರು ನೋಡೋ ಬದಲಿಗೆ ಕತ್ತೆತ್ತಿ ಆಕಾಶ ನೋಡಿದ್ದರೆ ಅಥವಾ ನೇತ್ರಾವತಿ ಅಲೆಗಳಲ್ಲಿ ಮಸುಕಾಗಿ ಮಿನುಗ್ತಿರೋ ಚುಕ್ಕಿಗಳನ್ನು ಕಾಣೊ ಮನಸ್ಸಾದ್ರೂ ಮಾಡಿದ್ದರೆ... ಅಂವಾ ಖರೇ ಅವತ್ತು ಸೇತುವೆ ದಾಟಿಯೇಬಿಡ್ತಿದ್ದ ಅಂತ ಈಗಲೂ ಅನ್ನಿಸುತ್ತೆ ಕಣೇ...' ಸೋಫಾದಲ್ಲಿ ಹಿಂದೆ ಒರಗಿ, ಎಡಗೈಯನ್ನು ಹಣೆಯ ಮೇಲಿರಿಸಿಕೊಂಡು ಹೇಳುತ್ತಿದ್ದ ಮೇಗಲೆ ವಾಕ್ಯವನ್ನು ಮುಗಿಸುತ್ತಿದ್ದಂತೆ ಕಣ್ಣೊರೆಸಿಕೊಂಡಳು.

ನಾಕೈದು ವರ್ಷಗಳಾದ್ರೂ ಇನ್ನೂ ಸಿದ್ಧಾರ್ಥನ ಆತ್ಮಹತ್ಯೆ ಇವಳನ್ನು ಕದಡುತ್ತಲೇ ಇದೆಯೇ...ಹೇಗೆ ಸಮಾಧಾನಿಸುವುದಪ್ಪ...ವಿನುತಾ ಮೆಲ್ಲಗೆ ಮೇಗಲೆಯ ಭುಜ ತಟ್ಟಿದಳು. ಸ್ವಲ್ಪ ಹೊತ್ತು ಇಬ್ಬರೂ ಮಾತಿಲ್ಲದೇ ಕೂತರು.

ವಿನುತಾ ಬಟ್ಟೆ ಬದಲಿಸಿ, ಬಚ್ಚಲಿಗೆ ಹೋಗಿ